ನಿನ್ನೆಯವರೆಗೆ ಅವರನ್ನು ತೆಗೆದು ಹಾಕಿಲ್ಲ, ಇವತ್ತು ಅವರಿಗೆ ನಾನು ದೂರವಾಣಿ ಮಾಡಲಿಲ್ಲ, ನಿನ್ನೆ ರಾತ್ರಿಯವರೆಗೆ ಅವರು ಇದ್ದರು, ತೀರ್ಥಹಳ್ಳಿ ಮುಖ್ಯಾಧಿಕಾರಿಗಳನ್ನು ತೆಗೆದುಹಾಕಿದ್ದೇವೆಂದು ಮಂತ್ರಿಗಳು ಇಲ್ಲಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಉಪ ವಿಭಾಗಾಧಿಕಾರಿಗಳು ಸಂಪೂರ್ಣವಾಗಿ ನಡೆದಿರುವ ಘಟನೆಯ ಮಾಹಿತಿಯನ್ನು ಸರ್ಕಾರಕ್ಕೆ ರವಾನಿಸಿದ್ದಾರೆ. ಅದನ್ನು ಆಧಾರವಾಗಿಟ್ಟುಕೊಂಡು ಅಲ್ಲಿರುವ ಮುಖ್ಯಾಧಿಕಾರಿಗಳು ಸಂಪೂರ್ಣವಾದ ಮಾಹಿತಿಯನ್ನು ಒದಗಿಸಿಕೊಡುವಂತೆ ಉಪ ವಿಭಾಗಾಧಿಕಾರಿಗಳು ಕೇಳಿದ್ದಾರೆ, ಆ ಮಾಹಿತಿ ಬಂದ ತಕ್ಷಣ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಆರಗಜ್ಞಾನೇಂದ್ರ :— ಉಪ ವಿಭಾಗಾಧಿಕಾರಿಗಳು ಒಂದು ಸಾರಿ ಸಂಪೂರ್ಣವಾಗಿ ತನಿಖೆ ನಡೆಸಿದ್ದಾರೆ, ಯಾರ್ಯಾರು ಸಹಕರಿಸಬೇಕೋ ಅವರು ಸಹಕರಿಸಿದ್ದಾರೆ. ನಿರ್ಣಯ ಪುಸ್ತಕವನ್ನು ಯಾರದೋ ಮನೆಯಲ್ಲಿಟ್ಟುಕೊಂಡು ತಿದ್ದಿ 20-30 ಹೆಸರುಗಳನ್ನು ಸೇರಿಸಿದ್ದಾರೆ. ಸಾಗುವಳಿ ಚೀಟಿಯನ್ನು ಪೋರ್ಜರಿಯಾಗಿ ಸತ್ತುಹೋದ ಅಧ್ಯಕ್ಷರ ಸಹಿ ಮಾಡಿ ಹಂಚಿದ್ದಾರೆ. ಅದರ ಆಧಾರದ ಮೇಲೆ ಜನರು ಈಗ ನನಗೆ ರಿಜಿಸ್ಟ್ರೇಷನ್ ಮಾಡಿಕೊಡಿ, ಲೈಸನ್ಸ್ ಕೊಡಿಸಿ ಎಂದು ಅರ್ಜಿಯನ್ನು ಕೊಟ್ಟಿದ್ದಾರೆ. ಆ ಅರ್ಜಿದಾರನನ್ನು ಹಿಡಿದುಕೊಂಡು ತನಿಖೆ ಮಾಡಿದರೆ ಎಲ್ಲಾ ಸಿಗುತ್ತದೆ, ಅಲ್ಲಿ ತನಿಖೆಯನ್ನೇ ಮುಂದುವರೆಸುತ್ತಿಲ್ಲ, ನಾವೊಂದು ತನಿಖೆ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದೇವೆ. ಸರ್ಕಾರದಿಂದ ಏನು ಆದೇಶ ಬರಲಿಲ್ಲವೆಂದು ಕೈಚೆಲ್ಲಿಕೊಂಡು ಕುಳಿತ್ತಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ನಿವೇಶನದ ಹಗರಣ ತನಿಖೆ ಆ ಪಂಚಾಯಿತಿಯ ಬಗ್ಗೆ ನಡೆಯುತ್ತಿದೆ. ಯಾರೆ ಪರವಾನಿಗೆಗಾಗಿ ಅರ್ಜಿ ಸಲ್ಲಿಸಿರುವವರಿದ್ದರೂ ಕೂಡ ಪರವಾನಿಗೆ ನೀಡಲಾಗುವುದಿಲ್ಲ, ತನಿಖೆ ಬೇಗ ಮುಗಿಸುವಂತೆ ಸರ್ಕಾರ ಎಲ್ಲಾ ರೀತಿಯ ಕ್ರಮವನ್ನು ತೆಗೆದುಕೊಳ್ಳುವುದು.

1. (ಅ) ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :— ಮಾನ್ಯ ಅಧ್ಯಕ್ಷರೆ, 20ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ 70 ಪ್ರಶ್ನೆಗಳ ಪೈಕಿ 60 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ಕೊಡಗು ಜಿಲ್ಲೆಯಲ್ಲಿ ಕಲ್ಯಾಣಮಂಟಪ ಪ್ರಾರಂಭಿಸಲು ಅನುಮತಿ ನೀಡಿಕೆ.

2641 (3061) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ):— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಜನರಿಗೆ ಹೊಸದಾಗಿ ಕಲ್ಲುಗಣಿಗಾರಿಕೆ ಪ್ರಾರಂಭಿಸಲು ಅನುಮತಿ ನೀಡಲಾಗಿದೆ, ಯಾವ ಮೌಲ್ಯಮಾಪನ ಆಧಾರದ ಮೇಲೆ ಯಾರು ಯಾರಿಗೆ ಪರವಾನಗಿ ನೀಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು).

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಅ) ಕೊಡಗು ಜಿಲ್ಲೆಯಲ್ಲಿ ಹೊಸದಾಗಿ ಈ ಕೆಳಕಂಡ 3 ಜನರಿಗೆ ಕಲ್ಲು ಗಣಿಗಾರಿಕೆ ಪ್ರಾರಂಭಿಸಲು ಅನುಮತಿ ನೀಡಲಾಗಿದೆ. ಕಲ್ಲು ಗಣಿಗಾರಿಕೆ ಪ್ರಾರಂಭಿಸಲು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು 1994ರ ನಿಯಮ 23 ಹಾಗೂ ಇದರಡಿಯ ಉಪ ನಿಯಮಗಳು (1) (2) (3) (4) ರಂತೆ ಮಂಜೂರಾತಿ ನೀಡಲಾಗಿದೆ.

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ವಿಳಾಸ	ಸರ್ವೆ ಸಂಖ್ಯೆ	ಗ್ರಾಮ	ವಿಸ್ತೀರ್ಣ	ಮಂಜೂರಾದ ದಿನಾಂಕ
1.	ಶ್ರೀ ಹೆಚ್. ದಸನಬ ಮಾದಪಟ್ಟ ಅಂಚೆ ಕುಶಾಲನಗರ ಸೋಮವಾರಪೇಟೆ ತಾ: ಕೊಡಗು ಜಿಲ್ಲೆ	43	ಗೊಂದಿ ಬಸವನಹಳ್ಳಿ	0-20 ಎಕರೆ	07-05-2001
2.	ಶ್ರೀ ಕೆ.ಹೆಚ್. ಉತ್ತಯ್ಯ ಹೆರೂರು ಅಂಚೆ ಮತ್ತು ಗ್ರಾಮ ಸೋಮವಾರಪೇಟೆ ತಾ: ಕೊಡಗು ಜಿಲ್ಲೆ	45	ದಡ್ಡಿ ಗ್ರಾಮ	0-10 ಎಕರೆ	21-05-2001
3.	ಶ್ರೀ ಸಿ.ಬಿ. ಗಣಪತಿ ಬಿನ್ ಬೂಪಣ್ಣ ಹೊಡೂರ್ ಗ್ರಾಮ ಮತ್ತು ಅಂಚೆ ಮಡಿಕೇರಿ ತಾಲ್ಲೂಕು ಕೊಡಗು ಜಿಲ್ಲೆ	45	ಹೊದೂರು ಗ್ರಾಮ	1-00 ಎಕರೆ	01-06-2001

ನಗರ ಪ್ರದೇಶದಲ್ಲಿ ಅಭಿವೃದ್ಧಿ ಶುಲ್ಕ ವಸೂಲಿ

2642 (3418) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನಗರ ಪ್ರದೇಶದಲ್ಲಿ ಅಭಿವೃದ್ಧಿ ತೆರಿಗೆ ವಸೂಲಿ ಮಾಡುವ ಬಗೆಗೆ ನಗರ ಸಭೆ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳ ನಡುವೆ ಜಿಜ್ಞಾಸೆ ಇದ್ದು ನಗರ ಸಭೆ ಅಭಿವೃದ್ಧಿ ಶುಲ್ಕ ವಸೂಲಿ ಮಾಡಲು ಕಾನೂನು ತೊಡಕು ಇರುವುದನ್ನು ಪರಿಹರಿಸಲು ಈ ಹಿಂದೆ ಸರ್ಕಾರವು ಆಶ್ವಾಸನೆ ನೀಡಿತ್ತೆ?